

ಸುಭಾಷ್ ವಾಘ್ಮೊರೆಗೆ ಭಯಂಕರ ಸಿಟ್ಟು ಬಂದಿತ್ತು. ಆದರೆ, ಸಿಟ್ಟು ಯಾರ ಮೇಲೆ ಎನ್ನುವುದು ನಶೆಯಲ್ಲಿ ಮರೆತುಹೋಗಿ ಆತ ಗಲಿಬಿಲಿಗೊಂಡ. ''ಮೋಟಾ ಸಾಹೇಬ್ ಇವತ್ತು ದಾಕ್‌ದಾರರ ಗುರುತು ಹಿಡಿದರಂತೆ, ಸಾಬ್'' ಬಂಡ್ಯಾ ವರದಿ ಒಪ್ಪಿಸಿದಾಗ ತನ್ನ ಸಿಟ್ಟು ಆ ಹಲ್ಕಾ ಬಡ್ಡಿಮಗ ಮುದುಕನ ಮೇಲೆ ಎಂದು ತೀರ್ಮಾನಿಸಿ, ಜಾಕ್ ಡೇನಿಯಲ್ಸ್ ಬಾಟಲಿಯನ್ನು ತುಟಿಗೇರಿಸಿ, ಒಂದೆರಡು ಪೆಗ್ ಆಗುವಷ್ಟು ವಿಸ್ಕಿಯನ್ನು ಒಮ್ಮೆಗೇ ಹೊಟ್ಟೆಗಿಳಿಸಿ, ಬಾಟಲಿಯನ್ನು ಟೀಪಾಯಿಯಲ್ಲಿ ಬಂಡ್ಯಾನ ಸಹಾಯದಿಂದ ನಡುಗುವ ಕೈಗಳಿಂದ ಇರಿಸಿ, ''ಬೇವರ್ಸಿ ಗೋಟ್ಯಾ ಎಲ್ಲಿ ಸತ್ತನೊ, ಹಲ್ಕಟ್ ಸೂಳೇಮಗ?'' ಎನ್ನುವ ಪ್ರಶ್ನೆಯನ್ನು ಬಂಡ್ಯಾನತ್ತ ಎಸೆದ ವಾಘ್ಮೊರೆಗೆ ಉತ್ತರ ಸಿಗದಿದ್ದಾಗ, ''ತಿಚಾ ಆಯಿಲಾ (ಇವನೌನ್)'' ಎಂದು ಅಶ್ಲೀಲವಾಗಿ ಬೈದು, ಮಾರ್ಲ್‌ಬರೊ ಸಿಗರೇಟನ್ನು ತುಟಿಗೇರಿಸಿ, ಚಿನ್ನದ ಹೊದಿಕೆಯುಳ್ಳ ಲೈಟರ್ ಅನ್ನು ಸಿಗರೇಟಿನ ಮೂತಿಗೆ ತಾಗಿಸಿ, ಸಿಗರೇಟು ಹಚ್ಚಿ, ಆಳವಾದ ದಮ್ಮೆಳೆದುಕೊಂಡು ನಾಲ್ಕಾರು ಬಾರಿ ಕೆಮ್ಮಿದ. ಕೈತಾಕಿ ಟೀಪಾಯಿ ಬಿದ್ದ ರಭಸಕ್ಕೆ ಹಾಸಿದ್ದ ಕಾಶ್ಮೀರ ಕಂಬಳಿಯ ಮೇಲೆ ಜಾಕ್‌ಡೇನಿಯಲ್ಸ್ ಬಾಟಲಿ ಅನಾಥವಾಗಿ ಬಿದ್ದು ಕಂಬಳಿಗೂ ನಶೆ ಏರಿಸಿತು. ಜಾಕ್ ಡೇನಿಯಲ್ಸ್ ಬಿದ್ದರೂ ಒಡೆಯದೆ ತನ್ನ ಸ್ಥೈರ್ಯ ಪ್ರದರ್ಶಿಸಿತು.

ತಾನು ಕುಳಿತ ರಿವಾಲ್ವಿಂಗ್ ಚೇರನ್ನು ತಿರುಗಿಸಿದಾಗ, ವಾಘ್ಮೊರೆಗೆ ಬಂಡ್ಯಾನ ಮುಖ ನೀಳವಾಗಿ, ಕೂದಲು ಕೆದರಿ, ಕತ್ತು ಇಲ್ಲದೆ ಬರೇ ರುಂಡ ಕಾಣಿಸಿದಂತಾಗಿ, ಕ್ಷಣ ಮಾತ್ರ ಉಂಟಾದ ದಿಗಿಲಿನಿಂದ ನಾಲಿಗೆ ಒಣಗಿದರೂ, ತುಟಿಯ ಸಂದಿನಿಂದ ಒಸರುತ್ತಿರುವ ಜೊಲ್ಲನ್ನು ಹಿಂಗೈಯಲ್ಲಿ ಒರೆಸಿಕೊಂಡ. ಅಷ್ಟರಲ್ಲಿ ಮೂಲೆಯಲ್ಲಿ ತಾನು ಇರಿಸಲು ಆಳುಮಗನಿಗೆ ಹೇಳಿದ ಮುದುಕನ ಕುರ್ಚಿ ಅವನ ಕಣ್ಣಿಗೆ ಬಿತ್ತು. ಅದೆಷ್ಟೋ ಬಾರಿ, ಮುದುಕ ತನ್ನ ಬಡಗಿತನದ ಕೌಶಲದಿಂದ ಅದಕ್ಕೆ ಮರುಜೀವ ಕೊಡಿಸಿದ್ದು, ಅಮಲಿನ ಪ್ರಭಾವದಲ್ಲೂ ವಾಘ್ಮೊರೆಗೆ ನೆನಪಾಯಿತು. ಸಾಮಾನ್ಯ ಕುರ್ಚಿ ಹಿಂಬದಿ ಒರಗುವಲ್ಲಿ ದಪ್ಪ ಖದ್ದರಿನ ಬಟ್ಟೆ ಸೀಟಿನಲ್ಲಿ ಓಬೀರಾಯನ ಕಾಲದ ಒಂದು ದಿಂಬು. ಅದರ ಮೇಲೆ ತೆಳುವಾದ ಖಾದಿ ಬಟ್ಟೆ. ವಾಘ್ಮೊರೆಗೆ ತೀರಾ ಅಸಹ್ಯವೆನಿಸಿ, ''ಅದನ್ನು ಸುಟ್ಟು ಹಾಕೋ'' ಎಂದು ಬಂಡ್ಯಾನಿಗೆ ಆಜ್ಞಾಪಿಸಿದ. ''ಸಾಹೇಬರ ಕುರ್ಚಿ'' ಎಂದೇನೋ ಆತ ತೊದಲಲು ಆರಂಭಿಸಿದಾಗ, ''ಯಾವನೋ ನಿನ್ನ ಸಾಹೇಬ? ಇನ್ನು ಅಂವ ವಾಪಸು ಬರುತ್ತಾನೆಯೇ? ನಾನೇ ಸಾಹೇಬ. ತಿಳ್ಕೊ'' ಎಂದು ದಬಾಯಿಸಿದಾಗ ಪಾಯಿಜಾಮ ಸ್ವಲ್ಪ ಒದ್ದೆಯಾದುದನ್ನು ಗಮನಿಸಿ, ವಾಲುತ್ತ, ಗೋಡೆಯ ಆಧಾರ ಪಡೆದು ಟಾಯಿಲೆಟ್ ಹೊಕ್ಕ.

ಬೃಹನ್ಮುಂಬಯಿ ಮಹಾನಗರ ಪಾಲಿಕೆಗೆ ಕಾರ್ಪೊರೇಟರ್‌ಗಳನ್ನು ಆಯ್ಕೆ ಮಾಡಲು ಚುನಾವಣೆ ಘೋಷಿಸಲ್ಪಟ್ಟಿತ್ತು. ಸತತ ಹತ್ತಾರು ಬಾರಿ ಅಪ್ಪಾ ಸಾಹೇಬರು ಅವಿರೋಧವಾಗಿ ಆಯ್ಕೆಗೊಳ್ಳುತ್ತಿದ್ದರು. ಮಹಾನಗರದ ಯಾವುದೇ ವಾರ್ಡ್‌ನಲ್ಲಿ ಅವರು ಸ್ಪರ್ಧಿಸಿದರೂ, ಅವರಿಗೆ ಪ್ರತಿಸ್ಪರ್ಧಿಯೇ ಇರುತ್ತಿರಲಿಲ್ಲ. ಯಾವ ವಾರ್ಡ್‌ನಲ್ಲಿ ಅವರು ಆರಿಸಿ ಬಂದರೂ, ಅವರ ಸೇವೆ ಕೇವಲ ಆ ವಾರ್ಡಿಗೆ ಮಾತ್ರ ಸೀಮಿತವಾಗಿರುತ್ತಿರಲಿಲ್ಲ. ಅಪ್ಪಾ ಸಾಹೇಬರು ಇಡೀ ಮಹಾನಗರದಲ್ಲೇ ಅತ್ಯಂತ ಜನಪ್ರಿಯ ವ್ಯಕ್ತಿಯಾಗಿದ್ದರು.